Doc-489
T-P-2

Reg No B G 155 3—6—72

55th Year of Publication ★ 'Satyavadi' daily, Mysore 4

In the State – The First
Golden Jubilee
Celebrated Paper
★
News Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಆಯುಧ ಪಡೆಯಲು ಪಾಕೀಸ್ತಾನದ ಯತ್ನ

ಪಾಕೀಸ್ತಾನದ ಯತ್ನ

ಪಾಕೀಸ್ತಾನವು ತನ್ನ ಸೆಂಟೋ ಸದಸ್ಯತ್ವದ ಮೂಲಕ ಅನ್ಯೋನ್ಯರಿಕದಿಂದ ಆಯುಧಗಳನ್ನು ಮತ್ತೆ ಪ್ರಯತ್ನಿಸುತ್ತಿದೆ ಎಂದು ಲಂಡನ್ ವಾರ್ತೆ

★

ಬೀಗ ಮುದ್ರೆ

ಬೆಂಗಳೂರಿನಿಂದ ಬಂದಿರುವ ವರದಿ ಪ್ರಕಾರ ಕೆಂಪಾಪುರ ಅಗ್ರಹಾರದ ಶ್ರೀ ಕಡಬ ವಿಶ್ವವಿ ಮಠದ ಧರ್ಮದರ್ಶಿಗಳ 2 ತಂಡಗಳಲ್ಲಿ ತಪ್ಪು ತಿಳಿವಳಿಕೆ ಹೊಡೆದಾಟದ ಫಲವಾಗಿ ಮಠವನ್ನು ಸರ್ಕಾರ ಬೀಗಮುದ್ರೆ ಮಾಡಿದೆ

★

ನಷ್ಟ ಲೆಕ್ಕಕ್ಕೆ ತಜ್ಞೆ

ದಾವಣಗೆರೆ ಹಾಗೂ ಹರಿಹರ ತಾಲ್ಲೂಕುಗಳಲ್ಲಿ ಕಳೆದ ವಾರ ಆದ ಆಲಿಕಲ್ಲು ಮಳೆಯಿಂದ ರೈತರಿಗೆ ಆಗಿರುವ ನಷ್ಟವನ್ನು ಅಂದಾಜು ಮಾಡುವಂತೆ ಅಧಿಕಾರಿಗಳಿಗೆ ಆಜ್ಞೆ ಮಾಡಿರುವುದಾಗಿ ಆರೋಗ್ಯ ಮಂತ್ರಿ ಶ್ರೀ ಹೆಚ್. ಸಿದ್ಧವೀರಪ್ಪನವರು ಬೆಂಗಳೂರಿನಲ್ಲಿ ತಿಳಿಸಿರುವರು.

★

ಪರ್ಯಾಲೋಚನೆ

ತಾಲ್ಲೂಕು ಮಂಡಲಿ ಆಸ್ಪತ್ರೆಗಳನ್ನು ಸರಕಾರ ವಹಿಸಿಕೊಳ್ಳುವ ಅಂಶ ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಸಾಮೂಹಿಕ ಅಭಿವೃದ್ಧಿ ಮಂತ್ರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ತಿಳಿಸಿದರು.

★

ನೇತ್ರ ಶಿಬಿರ

ನೇತ್ರಜ್ಞಾನಿ ಪದ್ಮಭೂಷಣ ಡಾ|| ಎಂ ಸಿ ಮೋದಿಯವರು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಈ ತಿಂಗಳು 5 ನೇ ತಾ|| ನೇತ್ರ ಚಿಕಿತ್ಸಾ ಶಿಬಿರ ಆರಂಭಿಸುವರು

ದಿವ್ಯವಾಣಿ

ರಾಷ್ಟ್ರೀಯ ಅನ್ಯಾಯವು ರಾಷ್ಟ್ರೀಯ ಪತನಕ್ಕೆ ಖಡಾಖಂಡಿತ ಮಾರ್ಗವಾಗಿದೆ

— ಡಬ್ಲ್ಯು. ಇ. ಗ್ಲಾಡ್‌ಸ್ಟನ್

○

ವಿಶ್ವದಲ್ಲೇ ದಾಖಲೆ

ಸಿಡ್ನಿಯಲ್ಲಿ ಶ್ರೀಮತಿ ಶ್ರೀಪತಿ ಜಾನಿಸ್ ಟಯರ್ ಬಾಯ್ ಹೆತ್ತ ಮಗುವು ಹದಿನೇಳು ಪೌಂಡುಗಳ ತೂಕವಿದೆ ಏಳೆಂಟು ತಿಂಗಳು ದೊಡ್ಡ ಮಗುವಿನಂತೆ ಭಾರಿ ಆಗಿದೆ ವಿಶ್ವದಲ್ಲೇ ಇದು ದಾಖಲೆಯಾಗಿದೆ

●

ಪ್ರಧಾನರಿಗೆ ಒತ್ತಾಯ

ಕಾಸರಗೋಡಿನ 3 ಮಂದಿಯ ನಿಯೋಗ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿರವರನ್ನು ನವ ದೆಹಲಿಯಲ್ಲಿ ಭೇಟಿ ಮಾಡಿ ಮಹಾಜನ ವರದಿ ಜಾರಿ ಮಾಡುವಂತೆ ಒತ್ತಾಯ ಮಾಡಿತು

★

ಶತಮಾನೋತ್ಸವ

ಜನಗಣತಿಯ ಶತಮಾನೋತ್ಸವವು ಅಕ್ಟೋಬರ್ 3 ನೇ ವಾರ ನಡೆಯುವುದೆಂದು ಜನಗಣತಿ ಅಧಿಕಾರಿಯವರಾದ ಶ್ರೀ ಟಿ. ವೇದಾಂತಂ ಹೈದರಾಬಾದಿನಲ್ಲಿ ತಿಳಿಸಿದರು.

★

ಗೋಪುರ ಕುಸಿತ

ಪ್ರಖ್ಯಾತ ಶ್ರೀರಂಗ ದೇವಾಲಯದ ಮೇಲಿನ ಇಪ್ಪತ್ತೊಂದುವರೆ ಮೀಟರ ಗೋಪುರದ ಮೇಲಿನ 2 ಮೀಟರು ಆಗಲದ ಸಿಮೆಹದ ಪ್ರತಿಮೆ ಕುಸಿದುಬಿತ್ತು. ಗೋಪುರದ ಒಂದುಭಾಗ ಕುಸಿದಿದೆ.

ಬಹಿರಂಗ ಪೆಟಿಯಲ್ಲಿ ಸಕ್ಕರೆ ಬೆಲೆ ಏರಿಕೆ.

ಬಂಡಿಗಳ ಪರಾರಿ

ಆಲಿರಾಜಪುರ ಬಂದೀಖಾನೆಯಿಂದ ಇಪ್ಪತ್ತಾರು ಮಂದಿ ಬಂದಿಗಳು ಪರಾರಿ ಆದರೆಂದು ಇಂಡೂರು ವಾರ್ತೆ

★

ಮಾವಿನ ಪರಬತ್‌ಗೆ ಗಿರಾಕಿ

ರಫ್ತಿಂದ ರೂ 1 ಲಕ್ಷ ಬೆಲೆಯ ಮಾವಿನ ಹಣ್ಣಿನ ರಸಕ್ಕೆ ಸ್ಟೇಟ್ಸ್ ಟ್ರೇಡಿಂಗ್ ಕಂಪೆನಿಗೆ ಆರ್ಡರು ಬಂದಿರುವುದಾಗಿ ನವ ದೆಹಲಿ ವಾರ್ತೆ ತಿಳಿಸುತ್ತದೆ

○

ರಾಜ್ಯಪಾಲರಿಗೆ ಸನ್ಮಾನ

ಮೈಸೂರು ಪುಸ್ತಭವನದಲ್ಲಿ ರಾಜ್ಯಪಾಲರವರಿಗೆ ನಾಳೆ 6 ಗಂಟೆಗೆ ವ್ಯವಸ್ಥೆಗೊಳಿಸಿದ್ದ ಪೌರ ಸನ್ಮಾನ 5-30 ಕ್ಕೆ ನಡೆಯುವಂತೆ ಬದಲಾವಣೆ ಆಗಿದೆ

★

● ಭಾರತದಲ್ಲಿ ಜನರ ಆಯುಸ್ಸಿನ ಪ್ರಮಾಣ 52 6 ಕ್ಕೆ ಹೆಚ್ಚಿದೆ

ಗೊಬ್ಬರದಲ್ಲಿ ವಂಚನೆ

ಕೋಲಾರದಿಂದ ಬಂದಿರುವ ವರದಿಯ ಪ್ರಕಾರ ರಾಸಾಯನಿಕ ಚೀಲಗಳಲ್ಲಿ ಮರಳು ತುಂಬಿದ್ದುದು ಕಂಡು ಬಂದು, ಈ ಕಾರ್ಯ ಮಾಡಿದವರ ಮೇಲೆ ಸೂಕ್ತವಾದ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಅಭಿವೃದ್ಧಿ ಮಂಡಲಿ ಸದಸ್ಯರು ಜಿಲ್ಲಾಧಿಕಾರಿಯವರನ್ನು ಒತ್ತಾಯ ಮಾಡಿರುವರು.

★

ಪ್ರಧಾನರ ಮೇಲೆ ಆರೋಪ

ಪ್ರಧಾನಿಯವರು ತಮ್ಮ ಘನತೆ ಉಪಯೋಗಿಸಿಕೊಂಡು ಕಾಂಗ್ರೆಸ್ ಪಾರ್ಟಿಯ ಚುನಾವಣೆ ನಿಧಿಗೆ ರೂ 20 ಲಕ್ಷದಿಂದ ರೂ 25 ಲಕ್ಷದ ವರೆಗೆ ಪ್ರತಿ ಭಾರಿ ಕೈಗಾರಿಕೆ ಸಂಸ್ಥೆಗಳಿಂದ ವಸೂಲ್ಮಾಡಿರುವುದಾಗಿ ಸ್ವ್ರೋ|| ಮಧುದಂಡವತೆ ಲೋಕಸಭೆಯಲ್ಲಿ ಆಪಾದಿಸಿದರು.

● ವಿದ್ಯುತ್ ಸಂಬಂಧಿಸಿದಂತೆ ಕೊಯಮ್ಮತ್ತೂರಲ್ಲಿ 500 ರೈತರ ಧರಣಿ ನಡೆಯುತ್ತಿತ್ತು

ಅತಿ ವೇಗದ ರೈಲು

ಜಪಾನಿನಲ್ಲಿ ಇದೇ ವರ್ಷ ಮಾರ್ಚಿ 15 ರಂದು ಒಸಾಕಾ ನಗರದಿಂದ ಓಕಾಯಮಾ ನಗರಕ್ಕೆ ಪಶ್ಚಿಮ ರೈಲ್ವೆ ಮಾರ್ಗದ 161 ಕಿಲೋಮೀಟರು ದೂರದ ರೈಲ್ವೇ ಮಾರ್ಗವನ್ನು ತೆರೆಯಲಾಗಿದೆ. ಟೋಕಿಯೋದಿಂದ ಓಕಾಯಾಮಾ ನಗರಕ್ಕೆ ಇರುವ 676 ಕಿಮೀ ದೂರವನ್ನು ಕೇವಲ ನಾಲ್ಕು ಗಂಟೆ 10 ನಿಮಿಷಗಳಲ್ಲಿ ಸೂಪರ್ ಎಕ್ಸ್‌ಪ್ರೆಸ್ ಗಂಟೆಗೆ 210 ಕಿಲೋಮೀಟರು ವೇಗದಲ್ಲಿ ಸೇರುತ್ತದೆ.

★

ಸೊಳೆಪರದೆಗಳು

ಬ್ಯಾಂಕ್ ರೋಡ್ ಬಾಹುಸಾಠ್, ಕಂಪೆನಿಯಲ್ಲಿ ಸಿಗುತ್ತವೆ

ನ್ಯಾಯವಾದ ಬೆಲೆ

A Fair price Shop in Actual practice

★

ರೈತ ಮತ್ತು ಕಾರ್ಮಿಕ ಸೇವಾ ಸಂಘ

ಸಂಘದ ಅಧ್ಯಕ್ಷರಾದ ಶ್ರೀ ಕೆ ಪಿ. ಜಂಬೂಗೌಡರ ಅಧ್ಯಕ್ಷತೆಯಲ್ಲಿ ಸೇರಿದ್ದ ರೈತ ಮತ್ತು ಕಾರ್ಮಿಕ ಸೇವಾ ಸಂಘದ ಸಭೆ ಕೂಲಂಕುಶವಾಗಿ ಪರಿಶೀಲಿಸಿ, ಶಾಂತಿ, ನೆಮ್ಮದಿ ಮತ್ತು ದೇಶದ ಹಿತದೃಷ್ಟಿಯಿಂದ ಭೂಸುಧಾರಣೆ, ನಗರ ಆಸ್ತಿ ಮಿತಿ ಮತ್ತು ಒಬ್ಬನಿಗೆ ಒಂದೇ ಕೆಲಸ ಎಂಬುದನ್ನು ಕೈಬಿಡುವಂತೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಒತ್ತಾಯಪಡಿಸಿದೆ. ಮುಂದಿನ ಸಾಲಿನ ಅಧಿಕಾರ ವರ್ಗ – ಶ್ರೀಗಳಾದ ಕೆ ಪಿ ಜಂಬೂಗೌಡ (ಅಧ್ಯಕ್ಷ) ಎಂ ಕೆ ಮುಕುಂದರಾವ್ (ಕಾರ್ಯದರ್ಶಿ) ಕೆ ಎಸ್ ಸಿದ್ದಪ್ಪ ಕೆ ಎಂ ವೆಂಕಟಾಚಲಯ್ಯ, ಕೆ ಆರ್ ಶಂಕರ್, ಎಂ ಪಿ ತಮ್ಮಣ್ಣ, ಕೆ ಎಸ್ ತಿಮ್ಮೇಗೌಡ, ಎಂ ಸಾಬೂಲಾಲ್, ಎಂ ಪುಟ್ಟಸ್ವಾಮಿ, ಡಾ|| ಎಂ ಎಸ್ ಪಂಡಿತ್, ಕೆ ಎಸ್ ಅಜೀಜ್ ಮತ್ತು ಕೊಡಗಹಳ್ಳಿ ಜೈ ಭಾರತ್ ರೈಸ್ ಮಿಲ್ಸ್ ಮಾಲೀಕರಾದ ಕೆ ಪಿ ಪುಟ್ಟಸ್ವಾಮಿ (ಕಾರ್ಯಕಾರಿ ಸಮಿತಿ ಸದಸ್ಯರು)

★

ದಿವ್ಯವಾಣಿ

ಕಾನೂನು ಕೊನೆಯದಾದಲ್ಲಿ ದಬ್ಬಾಳಿಕೆ ಆರಂಭವಾಗುತ್ತದೆ. – ವಿಲಿಯಂ ಪಿಟ್.

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ 'ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಆಸೆ – ಹುಡುಗ

ವುಡ್‌ಲ್ಯಾಂಡ್ 2-6-72ರಿಂದ ಅಮೋಘ 5ನೇ ವಾರ

..... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್, ಪಂಡರಿಬಾಯಿ
ನಿರ್ದೇಶನ : ರಾಜಶ್ರೀ ಸಹೋದರರು ನಿರ್ಮಾಪಕರು : ಎಂ ಜಿ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಟಾಕೀಸ್ ವಿತ್ ಲೌ

ಅಪೂರ್ವ 2ನೇ ವಾರ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ [ವಯಸ್ಕರಿಗೆ ಮಾತ್ರ]

ಜರೂರತ್

ಪಾತ್ರ– ರಿನ ರಾಯ್, ವಿಜಯ ಅರೋರ, ಅಸಿತ್ ಸೇನ್, ಮುನಸೊಹನ ಕೃಷ್ಣ
ಜಾನಿ ವಿಸ್ಕಿ, ಡಾನಿಡೆ ಜೊಪ್ಪ
ನಿರ್ದೇಶನ– ಬಿ ಆರ್. ಇಶಾರ ಸಂಗೀತ–ಬ್ರಿಜ್ ಭೂಷಣ್
ದಿನ 3 ಆಟಗಳು

Protect the Cow

SHAKTI SUDHA

A Superb Tonic

Contribute Liberally
to the National Defence Fund

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....

ಅಖಿಲ ಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore 4